ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ವಿಧಾನಸಭೆ & ವಿಧಾನಪರಿಷತ್ ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ

ದಿನಾಂಕ : DATE : 3.12.19.

# ಆಸ್ತಿ ವಿವರ ಸಲ್ಲಿಸದ ಶಾಸಕ, ಪರಿಷತ್ ಸದಸ್ಯರ ವರದಿ ರಾಜ್ಯಪಾಲರಿಗೆ ರವಾನೆ

ಬೆಂಗಳೂರು: ಲೋಕಾಯುಕ್ತ ಕಚೇರಿಗೆ ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸದ 14 ವಿಧಾನಸಭೆ ಸದಸ್ಯರು ಮತ್ತು ಏಳು ಮಂದಿ ವಿಧಾನಪರಿಷತ್ ಸದಸ್ಯರ ಬಗ್ಗೆ ವರದಿ ಸಿದ್ಧಪಡಿಸಿ ರಾಜ್ಯಪಾಲರಿಗೆ ನೀಡಲಾಗಿದೆ.

ಪ್ರತಿ ವರ್ಷ ತಮ್ಮ ಆಸ್ತಿ ವಿವರಗಳನ್ನು ಕಡ್ಡಾಯವಾಗಿ ಲೋಕಾಯುಕ್ತ ಕಚೇರಿಗೆ ಸಲ್ಲಿಸಬೇಕು ಎಂಬ ಕಾನೂನಿದ್ದರೂ, ಜನಪ್ರತಿನಿಧಿಗಳು ತಮ್ಮ ಆಸ್ತಿ ವಿವರಗಳನ್ನು ನೀಡಲು ಹಿಂದೇಟು ಹಾಕುತ್ತಿದ್ದಾರೆ. ಆಸ್ತಿ ವಿವರ ಸಲ್ಲಿಸುವಂತೆ ಸೂಚಿಸಿ ಈಗಾಗಲೇ ಹಲವು ಬಾರಿ ಕಾಲಾವಕಾಶದ ಗಡುವು ನೀಡುವುದರ ಜತೆಗೆ ಶೋಕಾಸ್ ನೋಟೀಸ್ ನೀಡಿದ್ದರೂ ಲೋಕಾಯುಕ್ತರ ಆದೇಶಕ್ಕೆ ಬೆಲೆ ನೀಡುತ್ತಿಲ್ಲ ಈ 21 ಜನಪ್ರತಿನಿಧಿಗಳು.

ಶಾಸಕರ ನಡೆ ಬಗ್ಗೆ ಬೇಸರಗೊಂಡಿರುವ ಲೋಕಾಯುಕ್ತ ಪಿ.ವಿಶ್ವನಾಥ ಶೆಟ್ಟಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 22(2)ರ ಅಡಿ ಈ ಜನಪ್ರತಿನಿಧಿಗಳ ಮಾಹಿತಿಯನ್ನೊಳಗೊಂಡ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದಾರೆ. ಈವರೆಗೆ ಎರಡು ಬಾರಿ ಕಾಲಾವಕಾಶ ನೀಡಿದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆ, ರಾಜ್ಯಪಾಲರಿಗೆ ವರದಿ ಸಲ್ಲಿಸುವುದರ ಜತೆಗೆ ಮುಂದಿನ ಕ್ರಮಕ್ಕೆ ಶಿಫಾರಸ್ಸು ಮಾಡಲು ಸಿದ್ಧತೆ ನಡೆಸಿದ್ದಾರೆ.

**ವರದಿಯಲ್ಲಿ ಐವರು ಮಾಜಿ ಸಚಿವರ ಹೆಸರು:** ವರದಿಯಲ್ಲಿ ಶಾಸಕರಾಗಿರುವ ಐದು ಮಾಜಿ ಸಚಿವರ ಹೆಸರಿದ್ದು, ಕಾಂಗ್ರೆಸ್‌ನಿಂದ ಜಮೀರ್ ಅಹ್ಮದ್ ಖಾನ್, ರಹೀಂ ಖಾನ್ ಮತ್ತು ವೆಂಕಟರಮಣಪ್ಪ, ಜೆಡಿಎಸ್‌ನಿಂದ ಎಂ.ಸಿ.ಮನುಗೂಳಿ ಹಾಗೂ ಕೆಪಿಜೆಪಿಯಿಂದ ಆರ್.ಶಂಕರ್ ಹೆಸರುಗಳಿವೆ.

ಉಳಿದಂತೆ ಶಾಸಕರಾದ ಎಂ.ವೈ.ಪಾಟೀಲ್, ರಾಜಕುಮಾರ್ ಪಾಟೀಲ್, ರೂಪಾಲಿ ಸಂತೋಷ್ ನಾಯಕ್, ಎಂ.ಪಿ.ರೇಣುಕಾಚಾರ್ಯ, ಜಿ.ಬಿ.ಜ್ಯೋತಿಗಣೇಶ್, ಸತೀಶ್ ರೆಡ್ಡಿ, ಎಂ.ಶ್ರೀನಿವಾಸ್ ಸೇರಿದಂತೆ ಬಿಜೆಪಿಯ ಒಟ್ಟು 7 ಶಾಸಕರು, ಕಾಂಗ್ರೆಸ್‌ನ ರೂಪಕಲಾ, ಬಿಎಸ್‌ಪಿ ಉಚ್ಚಾಟಿತ ಶಾಸಕ ಎನ್.ಮಹೇಶ್ ಇದ್ದಾರೆ. ಅನರ್ಹಗೊಂಡಿರುವ ಶಾಸಕ ಎಚ್.ವಿಶ್ವನಾಥ್ ಹೆಸರೂ ಪಟ್ಟಿಯಲ್ಲಿದೆ.

ಪರಿಷತ್ ಸದಸ್ಯರ ಪೈಕಿ ಬಿಜೆಪಿಯಿಂದ ತೇಜಸ್ವಿನಿ ಗೌಡ, ಕೆ.ಪಿ.ನಂಜುಂಡಿ, ಕಾಂಗ್ರೆಸ್‌ನಿಂದ ನಜೀರ್ ಅಹ್ಮದ್, ಡಿ.ಯು.ಮಲ್ಲಿಕಾರ್ಜುನ, ಸಿ.ಎಂ.ಇಬ್ರಾಹಿಂ ಮತ್ತು ಜೆಡಿಎಸ್‌ನಿಂದ ಕೆ.ಟಿ.ಶ್ರೀಕಂಠೇಗೌಡ ಮತ್ತು ಎನ್.ಅಪ್ಪಾಜಿಗೌಡ ಹೆಸರುಗಳಿವೆ.